ಒತ್ತು ಕೊಡಬೇಕು, ಅವೆಲ್ಲವನ್ನೂ ಮಾಡುತ್ತಾ ಮಾಡುತ್ತಾ ಇದನ್ನು ಮಾಡಬೇಕು. ಎಲ್ಲಾ ಜನಗಳಿಗೇ ಬಿಲ್ಡಿಂಗ್ ಕಟ್ಟುವುದು ಜನಗಳಿಗೇ ಆದರೆ ಪ್ರೈಯಾರಿಟಿ ಬಹಳ ಮುಖ್ಯ. ಆದ್ಯತೆ ಯಾವುದು? ಯಾವಾಗಲೂ ಸರ್ಕಾರ ಒಂದು ಆದ್ಯತೆಯನ್ನು ಗುರುತಿಸಿಕೊಳ್ಳಬೇಕಾಗುತ್ತದೆ. ಬಿಲ್ಡಿಂಗ್ ಕಟ್ಟಿಸುವುದು ಮೊದಲು ಆದ್ಯತೇನಾ? ಅಥವಾ ಬಡವರಿಗೆ 3 ರೂಪಾಯಿಗೆ ಅಕ್ಕಿ ಕೊಡುವುದು ಆದ್ಯತೇನಾ, ಈ ಪ್ರೈಯಾರಿಟಿನಲ್ಲಿ...

ಶ್ರೀ ವಾಟಾಳ್ ನಾಗರಾಜ್ : ನೀವು ಪಕ್ಕದಲ್ಲಿ ಏಕೆ ವಿಕಾಸ ಸೌಧವನ್ನು 110 ಕೋಟಿ ರೂಪಾಯಿಗಳಲ್ಲಿ ದೊಡ್ಡ ಬಿಲ್ಡಿಂಗ್ ಕಟ್ಟಲಿಕ್ಕೆ ಹೋದಿರಿ?

ಶ್ರೀ ಸಿದ್ಧರಾಮಯ್ಯ : ಅದನ್ನೆಲ್ಲಾ ನನ್ನ ಕೇಳಿದರೆ ಹೇಳಲಿಕ್ಕೆ ಆ-ಗುತ್ತಾದಾ? ಇರಲಿ ನೀವು ಕುಳಿತುಕೊಳ್ಳಿ, ಅದರ ಬಗ್ಗೆ ಬೇರೆ ಚರ್ಚೆ ಮಾಡೋಣ.

ಶ್ರೀ ಹೆಚ್. ಆಂಜನೇಯ : ಶಾಸಕರ ನಿಧಿ ಬಗ್ಗೆ ಹೇಳಿ.. ನಮ್ಮ ಬಯಲು ಸೀಮೆ ಅಭಿವೃದ್ಧಿಗೆ...

ಶ್ರೀ ಸಿದ್ಧರಾಮಯ್ಯ : ನಾನು ಈಗ ಹಿಂದೆಯೂ ಹೇಳಿದ್ದೇನೆ, ಈಗಲೂ ಹೇಳುತ್ತೇನೆ, ಇದು ಎಂಟು ತಿಂಗಳ ಬಜೆಟ್. ಎಂಟು ತಿಂಗಳವರೆಗೆ ಇರತಕ್ಕಂಥದ್ದು. ಮುಂದಿನ ವರ್ಷ ಬಜೆಟ್ ಮಂಡಿಸುವಾಗ ಈ ನಿಮ್ಮ ಎಲ್ಲಾ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು ಶಾಸಕರ ಅಭಿಪ್ರಾಯಗಳಿಗೆ ಗೌರವ ಕೊಡುವ ಕೆಲಸವನ್ನು ಮಾಡುತ್ತೇನೆ, ದಯಮಾಡಿ ಇದಕ್ಕೆ ಒಪ್ಪಿಗೆ ಕೊಡಬೇಕು.

ಪ್ರಸ್ತಾವದ ಅಂಗೀಕಾರ

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, "ದಿನಾಂಕ 31-3-2005ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಸಂಖ್ಯೆ 1,2,3,5,7,8,11,13,14,17,18,21,23,25,26 ಹಾಗೂ 27 ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಬರಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿದಂತೆ ಪೂರಕ ಅಂದಾಜುಗಳ (ಮೊದಲನೆಯ ಕಂತು) ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೊಡುತ್ತೇನೆ."

ಅಧ್ಯಕ್ಷರು : ನಾನು ಈಗ 2004-05ನೇ ಸಾಲಿನ ಪೂರಕ ಅಂದಾಜುಗಳ (ಮೊದಲಕಂತು) ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಏನೆಂದರೆ, ದಿನಾಂಕ 31-3-2005ರಂದು ಕೊನೆಯಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಸಂಖ್ಯೆ : 1,2,3,5,7,8,11,13,14,17,18,21,23,25,26, ಹಾಗೂ 27 ಇವುಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗು ಬಂಡವಾಳ ಖಾತೆಯಲ್ಲಿ ಮಂಜೂರ್ಮಾಡಿದ ಮೊಬಲಗು ಸೇರಿದಂತೆ ಪೂರಕ ಅಂದಾಜುಗಳು (ಮೊದಲನೆಯಕಂತು) ಪಟ್ಟಿಯಲ್ಲಿ ಸಮೂದಿಸಿದೆ ಮೊಬಲಗಿಗೆ ಮೀರದ ಮೊತ್ತವನ್ನು ಮಂಜೂರು ಮಾಡುವುದು."

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಪೂರಕ ಅಂದಾಜುಗಳನ್ನು (ಮೊದಲನೆಯ ಕಂತು) ಮಂಜೂರು ಮಾಡಲಾಯಿತು.

(ಮಾನ್ಯ ಅಧ್ಯಕ್ಷರೆ ಆದೇಶದ ಮೇರೆಗೆ ಮಂಜೂರಾದ ಪೂರಕ ಅಂದಾಜುಗಲನ್ನು (ಮೊದಲನೆಯ ಕಂತು) ಈ ಕೆಳಗೆ ನಮೂದಿಸಲಾಗಿದೆ.

ಪೂರಕ ಅಂದಾಜುಗಳು 2004–2005 (ಮೊದಲನೆಯ ಕಂತು)

ವಿನಿಯೋಗ ಅಧಿನಿಯಮವು ನೀಡಿದ ಅಧಿಕಾರದ ಮೇರೆಗೆ ಪ್ರಸಕ್ತ ವರ್ಷಕ್ಕಾಗಿ ಒಂದು ವಿಶಿಷ್ಟ ಸೇವೆಗೆ ವೆಚ್ಚ ಮಾಡತಕ್ಕ ಮೊಬಲಗು ಆ ವರ್ಷದ ಉದ್ದೇಶಕ್ಕಾಗಿ ಸಾಕಾಗದಿದ್ದರೆ ಅಥವಾ ಆ ವರ್ಷದ ವಾರ್ಷಿಕ ನಿರೂಪಣೆಯಲ್ಲಿ ಹೇಳಿರದ ಹೊಸಸೇವೆಗಾಗಿ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಪೂರಕ ಅಥವಾ ಹೆಚ್ಚಿನ ವೆಚ್ಚದ ಅವಶ್ಯಕತೆಯುಂಟಾಗಿದ್ದರೆ ಅಂದಾಜು ಮಾಡಿದ ವೆಚ್ಚದ ಮೊಬಲಗನ್ನು ತೋರಿಸುವ ಮತ್ತೊಂದು ವಿವರಣೆಯನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸಲು ಸಂವಿಧಾನದ 205(1)ನೆಯ ಅನುಚ್ಛೇದವು ಅವಕಾಶ ಕಲ್ಪಿಸಿದೆ.

2. ಸಂವಿಧಾನ ಸದರಿ ಉಪಬಂಧಕ್ಕನುಸಾರವಾಗಿ 7336.58 ಲಕ್ಷ ರೂಪಾಯಿಯ ಒಟ್ಟು ಮೊತ್ತದಷ್ಟು ಪೂರಕ ಅಂದಾಜುಗಳನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸಲಾಗಿದೆ. ಈ ಅಂದಾಜುಗಳು ವಿಧಾನಮಂಡಲದ ಮುಂದೆ 2004ರ ಫೆಬ್ರವರಿ ತಿಂಗಳಲ್ಲಿ ಮಂಡಿಸಲಾದ 2004–2005ನೆಯ ಸಾಲಿನ ಆಯವ್ಯಯ ಅಂದಾಜುಗಳ ತರುವಾಯ ಸಾದಿಸ್ವಾರು ನಿಧಿಯಿಂದ ಮಂಜೂರಾದ ಮುಂಗಡಗಳಿಗೆ ಸಂಬಂಧಿಸಿವೆ;

3. ಸಾದಿಸ್ವಾರು ನಿಧಿಯಿಂದ ಮಂಜೂರಾದ ಮತ್ತು ಅದನ್ನು ಭರಿಸಲು ಪೂರಕ ಅಂದಾಜುಗಳಲ್ಲಿ ಸೇರಿಸಲಾದ ಮುಂಗಡವನ್ನು ತೋರಿಸುವ ವಿವರಣೆಯನ್ನು ಅನುಬಂಧದಲ್ಲಿ ತೋರಿಸಲಾಗಿದೆ.

4. ಪೂರಕ ಅಂದಾಜುಗಳಲ್ಲಿ ಒದಗಿಸಿರುವ ರೂ. 7336.58 ಲಕ್ಷಗಳಲ್ಲಿ ರೂ.2432.07 ಲಕ್ಷಗಳು ಕೇಂದ್ರ ಸಹಾಯಕ್ಕೆ ಸಂಬಂಧಿಸಿದೆ, ರೂ. 397.58 ಲಕ್ಷಗಳು ಜಮೆಗಳಿಗೆ ಸಂಬಂಧಿಸಿದೆ. ರಾಜಸ್ವದಿಂದ ನಿವ್ವಳ ಮೊತ್ತ 4506.93 ಲಕ್ಷ ರೂಪಾಯಿ ಮಾತ್ರವಾಗಿದೆ.

2004–2005ನೇ ಸಾಲಿನ ಪೂರಕ ಅಂದಾಜುಗಳು (ಮೊದಲನೆ ಕಂತು)

ಅಭಿಯಾಚನೆ ಕ್ರಮಾಂಕ	ಸೇವೆಗಳು ಮತ್ತು ಉದ್ದೇಶಗಳು		ಮೊಬಲಗು (ಲಕ್ಷಗಳಲ್ಲಿ)		
			ಪ್ರಭೃತ	ಪುರಸ್ಕೃತ	ಒಟ್ಟು
01.	ಕೃಷಿ ಮತ್ತು ತೋಟಗಾರಿಕೆ	ರಾಜಸ್ವ	25.00		25.00
02.	ಪಶುಸಂಗೋಪನೆ ಮತ್ತು ಮೀನುಗಾರಿಕೆ	ಬಂಡವಾಳ	100.00		100.00
03.	ಆರ್ಥಿಕ	ರಾಜಸ್ವ	524.79		524.79
04.	ಒಳಾಡಳಿತ ಮತ್ತು ಸಾರಿಗೆ	ರಾಜಸ್ವ	200.00		200.00
05.	ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್	ರಾಜಸ್ವ	2091.10		2091.10

1	2	3	4	5
08.	ಅರಣ್ಯ, ಜೀವಿ ಶಾಸ್ತ್ರ ಮತ್ತು ಪರಿಸರ	ರಾಜಸ್ವ	150.00	150.00
11.	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ	ರಾಜಸ್ವ	1691.72	1691.72
13.	ಆಹಾರ ಮತ್ತು ನಾಗರೀಕ ಸರಬರಾಜು	ರಾಜಸ್ವ	500.00	500.00
14.	ಕಂದಾಯ	ರಾಜಸ್ವ	249.83	249.83
17	ಶಿಕ್ಷಣ	ರಾಜಸ್ವ	500.00	500.00
18	ವಾಣಿಜ್ಯ ಮತ್ತು ಕೈಗಾರಿಕಾ	ರಾಜಸ್ವ	240.00	240.00
21	ಜಲ ಸಂಪನ್ಮೂಲ	ಬಂಡವಾಳ	247.58	247.58
23	ಕಾರ್ಮಿಕ	ರಾಜಸ್ವ	646.00	646.00
25	ಕನ್ನಡ ಮತ್ತು ಸಂಸ್ಕೃತಿ	ರಾಜಸ್ವ	85.00	85.00
26	ಯೋಜನೆ, ಸಾಂಖ್ಯಿಕ ಹಾಗೂ ವಿಜ್ಞಾನ			
	ಮತ್ತು ತಂತ್ರಜ್ಞಾನ	ರಾಜಸ್ವ	35.00	35.00
27	ಕಾನೂನು	ರಾಜಸ್ವ	50.00	50.00
	ಒಟ್ಟು	ರಾಜಸ್ವ	6989.00	6989.00
		ಬಂಡವಾಳ	347.58	347.58
	ಒಟ್ಟು		**7336.58**	**7336.58**

8. ಶಾಸನ ರಚನೆ

ಅ) ವಿಧೇಯಕದ ಮಂಡನೆ, ಪರ್ಯಾಲೋಚನೆ ಮತ್ತು ಅಂಗೀಕಾರ

ಕರ್ನಾಟಕ ಧನ ವಿನಿಯೋಗ (ಸಂಖ್ಯೆ–2) ವಿಧೇಯಕ 2004

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, "2004ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ–2) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"2004ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ 2) ವಿಧೇಯಕವನ್ನು (ಮಂಡಿಸಲು ಸಭೆಯು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, "2004ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ 2) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಅಧ್ಯಕ್ಷರು : *ವಿಧೇಯಕವನ್ನು ಮಂಡಿಸಲಾಗಿದೆ *